# ಪತ್ರಿಕಾ ಪ್ರಕಟಣೆ

**ಮನೆ ಕನ್ನಾ ಕಳವು ಮಾಡುತ್ತಿದ್ದ ಆರೋಪಿತರ ಬಂಧನ.**
**(ವಿಶ್ವವಿದ್ಯಾಲಯ ಪೊಲೀಸ ಠಾಣೆಯ ಪೊಲೀಸರು 10 ಮನೆ ಕಳ್ಳತನ ಪ್ರಕರಣಗಳಲ್ಲಿ 265 ಗ್ರಾಂ ಬಂಗಾರದ ಆಭರಣಗಳು, ಒಟ್ಟು 12,47,500 /-ರೂ ಕಿಮ್ಮತ್ತಿನವುಗಳನ್ನು ವಶಪಡಿಸಿಕೊಂಡಿದ್ದು)**

ಇಂದು ದಿನಾಂಕ 04.06.2022 ರಂದು ಆರೋಪಿತನಾದ ಲಾಲ್ಯಾ ತಂದೆ ಅಂಜೀರ್ಯಾ ಕಾಳೆ ಸಾ: ಸಾವಳಗಿ ತಾ:ಜಿ: ಕಲಬುರಗಿ ಈತನನ್ನು ಮಾನ್ಯ ಶ್ರೀ ರವಿಕುಮಾರ್ ವೈ.ಎಸ್, ಪೊಲೀಸ್ ಆಯುಕ್ತರು, ಕಲಬುರಗಿ ನಗರ ರವರ ಮತ್ತು ಮಾನ್ಯ ಶ್ರೀ ಅಡ್ಡೂರು ಶ್ರೀನಿವಾಸುಲು ಐ.ಪಿ.ಎಸ್, ಉಪ ಪೊಲೀಸ ಆಯುಕ್ತರು (ಕಾ.ಸು.) ಹಾಗೂ ಶ್ರೀ ಶ್ರೀಕಾಂತ ಕಟ್ಟೀಮನಿ ಕೆ.ಎಸ್.ಪಿ.ಎಸ್, ಉಪ ಪೊಲೀಸ ಆಯುಕ್ತರು (ಅ.ಸಂ) ಕಲಬುರಗಿ ನಗರ, ರವರ ಮಾರ್ಗದರ್ಶನದಲ್ಲಿ ಮಾನ್ಯ ಎ.ಸಿ.ಪಿ. ಶ್ರೀ ಜೆ.ಹೆಚ್. ಇನಾಮದಾರ (ಸಿ) ಉಪವಿಭಾಗ ಕಲಬುರಗಿ ನಗರ, ಇವರ ನೇತೃತ್ವದಲ್ಲಿ ಶ್ರೀ ಅರುಣ ಎಸ್ ಮುರಗುಂಡಿ ಪಿ.ಐ. ವಿಶ್ವ ವಿದ್ಯಾಲಯ ಪೊಲೀಸ ಠಾಣೆ ಕಲಬುರಗಿ, ಶ್ರೀ ರಾಜು ಟಕಳೆ, ಪ್ರಭಾಕರ, ಪ್ರಕಾಶ, ವಿಶ್ವನಾಥ, ಶಶಿಕಾಂತ, ಮಂಜುನಾಥ ರವರಿಂದ ಕೂಡಿದ ತಂಡ ಕಲಬುಗರಿ ನಗರದ ಲಕ್ಷ್ಮೀ ನಗರದಲ್ಲಿ ಹೋಗುತ್ತಿರುವಾಗ ಸದರಿ ಆರೋಪಿ ಲಾಲ್ಯಾ ಈತನು ಮೋಟಾರ ಸೈಕಲ್ ಮೇಲೆ ಸಂಶಯಾಸ್ಪದವಾಗಿ ತಿರುಗಾಡುತ್ತಿರುವ ವ್ಯಕ್ತಿಯನ್ನು ಬೆನ್ನು ಹತ್ತಿ ಹಿಡಿದಾಗ ಅವನ ಹತ್ತಿರ ಒಂದು ಕಬ್ಬಿಣದ ರಾಡ, ಒಂದು ಮೋಟಾರ ಸೈಕಲ್ ಇದ್ದದ್ದು ಕಂಡು ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ಕರೆತಂದು ಕೂಲಂಕೂಶವಾಗಿ ವಿಚಾರಣೆ ಮಾಡಲಾಗಿ ಅವರ ಹೆಸರು ಲಾಲ್ಯಾ ತಂದೆ ಅಂಜೀರ್ಯಾ ಕಾಳೆ ವಯ: 25 ವರ್ಷ, ಜಾ: ಪಾರದಿ, ಸಾ: ಸಾವಳಗಿ ತಾ:ಜಿ: ಕಲಬುರಗಿ. ಅಂತಾ ತಿಳಿಸಿ, ಅವನು ಕಲಬುರಗಿ ನಗರದ ಮಾನಸ ರೆಸಿಡೆನ್ಸಿ, ಕುಬೇರ್ ಲೇ ಔಟ್, ಸಿದ್ದಗಂಗಾ ನಗರ, ಪೂಜಾ ಕಾಲೋನಿ, ಲಕ್ಷ್ಮೀ ನಗರ, ಎಮ್.ಜಿ ಕಾಲೋನಿ ಆಜಾದಪೂರ, ಎಸ್.ಎಮ್ ಲೇ ಔಟ್ ಕೋಟನೂರ (ಡಿ) ಏರಿಯಾದ ಮನೆಗಳನ್ನು ಕಳ್ಳತನ ಮಾಡಿರುವ ಬಗ್ಗೆ ತಮ್ಮ ತಪ್ಪನ್ನು ಒಪ್ಪಿಕೊಂಡು ಅವನು ಮನೆ ಕಳ್ಳತನ ಮಾಡಿದ್ದರಿಂದ ಒಟ್ಟು 10 ಪ್ರಕರಣಗಳಲ್ಲಿ ಸಿಕ್ಕಿರುವ ಒಟ್ಟು 265 ಗ್ರಾಂ ಬಂಗಾರದ ಆಭರಣಗಳು ಹೀಗೆ ಒಟ್ಟು ಅಂದಾಜು 12,47,500/-ರೂ ಬೆಲೆಬಾಳುವ ಬಂಗಾರದ ಸಾಮಾನುಗಳನ್ನು ಮತ್ತು ಒಂದು ಮೋಟಾರ ಸೈಕಲ್ ಆರೋಪಿತರು ಹಾಜರು ಪಡಿಸಿದ್ದು ಅದನ್ನು ಪೊಲೀಸ್ ಅಧಿಕಾರಿಗಳು ತನಿಖೆ ಕಾಲಕ್ಕೆ ವಶಪಡಿಸಿಕೊಂಡಿದ್ದು ಇರುತ್ತದೆ.

ಸದರಿ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶಸ್ವಿಯಾದ ಕಲಬುರಗಿ ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ರವರು ಮತ್ತು ಮಾನ್ಯ ಡಿ.ಸಿ.ಪಿ. (ಕಾ.ಸು.), ಕಲಬುರಗಿ ನಗರ ಹಾಗೂ ಡಿ.ಸಿ.ಪಿ. (ಅ.ಸಂ.), ರವರು ಮೆಚ್ಚುಗೆ ವ್ಯಕ್ತಪಡಿಸಿದ್ದು ಇರುತ್ತದೆ.